### ರೋಗಿಗಳ ಜೀವಕ್ಕೆ ಮಾರಕವಾದ ಹಿನ್ನೆಲೆಯಲ್ಲಿ ಔಷಧ ಗುಣಮಟ್ಟ ಸಂಸ್ಥೆಯು ಕ್ರಮ

# 15 ಕಂಪನಿಗಳ ಔಷಧ ಬಳಕೆ ನಿಷೇಧ

**ವಿಕ ಸುದ್ದಿಲೋಕ** ಬೆಂಗಳೂರು

ರೋಗಿಗಳ ಜೀವ ಉಳಿಸಬೇಕಾದ ಔಷಧವೇ ಮಾರಕವಾಗಿದ್ದು, ಈ ಕುರಿತು ತಪಾಸಣೆ ನಡೆಸಿರುವ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆಯು ಗುಣಮಟ್ಟವಿಲ್ಲದ ಹದಿನೈದು ಕಂಪನಿಗಳ ಔಷಧಗಳನ್ನು ನಿಷೇಧಿಸಿದೆ.

ಕಳೆದ ಆರು ತಿಂಗಳ ಹಿಂದಷ್ಟೇ ಗುಣಮಟ್ಟವಿಲ್ಲದ 168ಕ್ಕೂ ಹೆಚ್ಚು ಔಷಧಗಳ ಮಾಹಿತಿಯನ್ನು ಸಂಸ್ಥೆ ಹೊರಹಾಕಿತ್ತು, ಇದೀಗ ಮತ್ತೆ 15 ಕಂಪನಿಗಳ ಔಷಧಗಳ ದಾಸ್ತಾನು ಹಾಗೂ ಮಾರಾಟವನ್ನು ನಿಷೇಧಿಸಿದೆ. ಈ ಔಷಧಗಳನ್ನು ಔಷಧ ವ್ಯಾಪಾರಿಗಳು, ಸಗಟು ಔಷಧ ಮಾರಾಟಗಾರರು, ವೈದ್ಯರು, ಆಸ್ಪತ್ರೆ ಮತ್ತು ನರ್ಸಿಂಗ್ ಹೋಂಗಳಲ್ಲಿ ದಾಸ್ತಾನು ಹಾಗೂ ಮಾರಾಟವನ್ನು ಹೊಂದಿದ್ದಲ್ಲಿ ಕೂಡಲೇ ಸಂಬಂಧಪಟ್ಟ ಕ್ಷೇತ್ರದ ಔಷಧ ಪರಿವೀಕ್ಷಕರು ಅಥವಾ ಸಹಾಯಕ ಔಷಧ ನಿಯಂತ್ರಕರ ಗಮನಕ್ಕೆ ತರಲು ಕೋರಿದೆ. ಸಾರ್ವಜನಿಕರು ಈ ಔಷಧಗಳನ್ನು ಉಪಯೋಗಿಸಬಾರದೆಂದು ತಿಳಿಸಿದೆ.



**ನಿಷೇಧಿತ ಔಷಧಗಳ ಪಟ್ಟಿ**

ಚೆನ್ನೈನ ಕೌಶಿಕ್ ತೆರಾಪಿಯೋಟಿಕ್ಸ್ ಪ್ರೈವೇಟ್ ಲಿ. ತಯಾರಿಸುವ "ವೈಮು ಡಿ ಆಲ್ಫಾ ಲಿಪೋಯಿಕ್ ಆಸಿಡ್, ಪೈರಿಡೋಕ್ಸಿನ್ ಹೈಡ್ರೋ ಕ್ಲೋರೈಡ್, ಮೈಥಲ್ ಕೋಬಾಲಮಿನ್, ಫಾಲಿಕ್ ಆಸಿಡ್ ಮತ್ತು ವಿಟಮಿನ್ ಡಿ3 ಟ್ಯಾಬ್ಲೆಟ್"ಗಳನ್ನು ನಿಷೇಧಿಸಲಾಗಿದೆ.

ಉತ್ತರಖಂಡ ಹರಿದ್ವಾರದ ಮೆಡಿಕಮೆನ್ ಬಯೋಟೆಕ್ ಲಿ.ನ "ಲೋಡನ್ ಟ್ಯಾಬ್ಲೆಟ್ (ಅಸಿಕ್ಲೋಫಿನಾಕ್ ಮತ್ತು ಪ್ಯಾರಸಿಟಮೋಲ್ ಟ್ಯಾಬ್ಲೆಟ್)", ಹರಿದ್ವಾರದ ಫ್ರಾನ್ಸಿಸ್ ರೆಮಿಡೀಸ್ (ಇಂಡಿಯಾ) ಪ್ರೈ. ಲಿ.ನ "ಅಸಿಕೇರ್-ಪಿ (ಅಸಿಕ್ಲೋಫಿನಾಕ್ ಮತ್ತು ಪ್ಯಾರಾಸಿಟಮೆಲ್ ಟ್ಯಾಬ್ಲೆಟ್)", ಉತ್ತರ ಪ್ರದೇಶದ ಸಿನ್ಯೋಕೆಮ್ ಲ್ಯಾಬೋರೇಟರಿಸ್ ಲಿ.ನ "ಐರೋಸೆಕ್ ಇಂಜೆಕ್ಷನ್ ಐರನ್ ಸುಕ್ರೋಸ್ ಇಂಜೆಕ್ಷನ್ ಯುಎಸ್‌ಪಿ" ಹಾಗೂ ಅನೋಂಡಿಟಾ ಹೆಲ್ತ್‌ಕೇರ್‌ನ "ವಿಗೋರಾ (ಮಲ್ಟಿ ಟೆಕ್ಸ್ಚರ್ ಕಾಂಡಮ್ಸ್)", ಬೆಂಗಳೂರಿನ ಕರ್ನಾಟಕ ಆಂಟಿ ಬಯೋಟಿಕ್ ಮತ್ತು ಫಾರ್ಮಾಸ್ಯುಟಿಕಲ್ ಲಿ.ನ ಆಕ್ಸಿಟೋಸಿನ್ ಇಂಜೆಕ್ಷನ್ ಐಪಿ (5ಐಯು)", ಹಿಮಾಚಲ ಪ್ರದೇಶದ ಅಲಿಯನ್ಸ್ ಬಯೋಟೆಕ್‌ನ ಎನ್-ಪಾರ್ ಟ್ಯಾಬ್ಲೆಟ್ಸ್ (ನಿಮೆಸುಲೈಡ್ ಆ್ಯಂಡ್ ಪ್ಯಾರಾಸಿಟಮೋಲ್ ಟ್ಯಾಬ್ಲೆಟ್ )ಗಳ ಮಾರಾಟವನ್ನು ತಡೆಯಲಾಗಿದೆ.

ಹಿಮಾಚಲ ಪ್ರದೇಶದ ಜೆ.ಜೆ. ನ್ಯೂಟ್ರಿಷನ್ ಲಿ. ನ 'ಲಾರ್ಗ್ ಪೋಡ್-ಸಿವಿ (ಸೆಫ್ ಪೋಡೋಕ್ಸಿನ್ ಆ್ಯಂಡ್ ಪೊಟಾಸಿಯಮ್ ಕ್ಲಾವುಲನೇಟ್ ಟ್ಯಾಬ್ಲೆಟ್) ' ಹಾಗೂ ಲೈಫ್ ವಿಷನ್ ಹೆಲ್ತ್ ಕೇರ್‌ನ ಪಿಡಾಕ್ಸ್-ಎಝಡ್ (ಸೆಫ್‌ಪೋಡೋಕ್ಸಿನ್ 200 ಎಮ್‌ಜಿ ಮತ್ತು ಅಜಿತ್ರೋಮೈಸಿನ್ 250 ಎಮ್‌ಜಿ ಟ್ಯಾಬ್ಲೆಟ್), ಮತ್ತು ವೆನಾಸ್ ಬಯೋಸೈನ್ಸ್ ಪ್ರೈ. ಲಿ.ನ 'ಅಜಿತ್ರೋಮೈಸಿನ್ ಟ್ಯಾಬ್ಲೆಟ್ ಐ.ಪಿ. 500 ಎಮ್‌ಜಿ (ಎಜಡ್‌ಐಟಿ-500)', ಶ್ರೀ ಸಾಯಿ ಬಾಲಾಜಿ ಫಾರ್ಮಾಸ್ಯುಟಿಕಲ್ಸ್ ಪ್ರೈ.ಲಿ.ನ 'ಅಮೋಕ್ಸಿಲಿನ್ ಮತ್ತು ಪೊಟಾಸಿಯಮ್ ಕ್ಲಾವುಲನೇಟ್ ಟ್ಯಾಬ್ಲೆಟ್ ಐಪಿ (ಜೋವಮೋಕ್ಸ್-ಸಿವಿ 625)', ಅಕ್ಮೇ ಜೆನರಿಕ್ಸ್ ಎಲ್ ಎಲ್‌ಪಿ.ನ 'ರಿಯಾಕ್ಟಿನ್ 50 (ಡೈಕ್ಲೋಫಿನಾಕ್ ಸೋಡಿಯಮ್ ಟ್ಯಾಬ್ಲೆಟ್ ಐಪಿ 50 ಎಂಜಿ)'ಯನ್ನು ನಿಷೇಧಿಸಲಾಗಿದೆ.

ತಮಿಳುನಾಡಿನ ಗೋಮತಿ ಶಂಕರ್ ಸರ್ಜಿಕಲ್ಸ್‌ನ 'ರೋಲರ್ ಬ್ಯಾಂಡೇಜ್ ಸ್ಟೆರೈಲ್ ಎಫ್', ಹಿಮಾಚಲಪ್ರದೇಶದ ಅಲ್ಟ್ರಾ ಡ್ರಗ್ಸ್ ಪ್ರೈ. ಲಿ.ನ ' ಸೆಫ್ಪೋಡೋಕ್ಸೈಮ್ ಆಂಡ್ ಒಫ್ಲೋಕ್ಸಾಸಿನ್ ಟ್ಯಾಬ್ಲೆಟ್ಸ್ (ಪೋಡೋಕ್ಸಿಲ್-ಒ).' ಉತ್ತರಖಂಡದ ಸೆನೆಟ್ ಲ್ಯಾಬೋರೇಟರಿಸ್‌ನ 'ಜೆನಿಕ್ಸಿಮ್-200 ಟ್ಯಾಬ್ಲೆಟ್ (ಸೆಫಿಕ್ಸಿಮ್ ಟ್ರೈಹೈಡ್ರೇಟ್ ಮತ್ತು ಲ್ಯಾಕ್ಟಿಕ್ ಆಸಿಡ್ ಬೆಸಿಲಸ್ ಟ್ಯಾಬ್ಲೆಟ್)' ಔಷಧಗಳನ್ನು ಉಪಯೋಗಿಸಬಾರದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.